# ಎನ್‌ಐಟಿಕೆ ಸುರತ್ಕಲ್‌ನಲ್ಲಿ ಸಂಗೀತ, ನಾಟಕ ನೃತ್ಯ



**ಸುರತ್ಕಲ್, ನ. 3:** ಎನ್‌ಐಟಿಕೆ ಸುರತ್ಕಲ್ ಕನ್ನಡ ವೇದಿಕೆಯ ವತಿಯಿಂದ ಕರ್ನಾಟಕ ರಾಜ್ಯೋತ್ಸವದ ಆಚರಣೆ ನಡೆಯಿತು.

ರಾಜ್ಯೋತ್ಸವದ ಅಂಗವಾಗಿ ಸಂಗೀತ, ನಾಟಕ, ನೃತ್ಯ ಸಹಿತ ವಿವಿಧ ಪ್ರದರ್ಶನಗಳನ್ನು ಆಯೋಜಿಸಲಾಗಿತ್ತು.

ಎನ್‌ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಅಧ್ಯಕ್ಷತೆ ವಹಿಸಿದ್ದರು.

ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಾಗೂ ಖ್ಯಾತ ಜಾನಪದ ವಿದ್ವಾಂಸ ಡಾ| ಶಂಭು ಬಳಿಗಾರ್‌ಕಲಾವಿದೆ ಭಾವನಾ ರಾವ್, ಉಪ ನಿರ್ದೇಶಕ ಪ್ರೊ| ಸುಭಾಷ್ ಸಿ. ಯರಗಲ್, ಪ್ರಭಾರ ರಿಜಿಸ್ಟ್ರಾರ್‌ಪ್ರೊ| ಕುಮಾರ್‌ಜಿಎನ್, ಡೀನ್ (ವಿದ್ಯಾರ್ಥಿ ಕಲ್ಯಾಣ) ಪ್ರೊ| ಗೋವಿಂದ ರಾಜ್ ಮಂಡೇಲಾ ಮತ್ತು ಕನ್ನಡ ವೇದಿಕೆಯ ಅಧ್ಯಾಪಕ ಸಲಹೆಗಾರ ಡಾ| ಕಿರಣ್ ಎಂ. ಸಹಿತ ಸಂಸ್ಥೆಯ ಹಿರಿಯ ಗಣ್ಯರು ಉಪಸ್ಥಿತರಿದ್ದರು.

ಒಂದು ವಾರ ನಡೆದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು, ಅಧ್ಯಾಪಕರು, ಸಿಬಂದಿ ಮತ್ತು ಪಾಲುದಾರ ಸಂಸ್ಥೆಗಳ ಅತಿಥಿಗಳು ಸೇರಿದಂತೆ 500 ಕ್ಕೂ ಹೆಚ್ಚು ಜನರು ಭಾಗವಹಿಸಿದ್ದು ಕನ್ನಡ ಕಾರ್ಯಕ್ರಮ ಗಮನ ಸೆಳೆಯಿತು.

Udayavani, Date: 04/11/25, p.03